

# ಯಾವುದೋ ಒಂದು ಪದದಿಂದ ಮನುಷ್ಯನನ್ನು ವಿಶ್ಲೇಷಿಸಲು ಸಾಧ್ಯವಿಲ್ಲ...

## ಮರಿಯೆಲಾ ಕೊರ್ದೆರೊ ಕಿರು ಸಂದರ್ಶನ

◆ **ಕವಿತೆ ಅಂದ್ರೇನು? ಕವಿತೇನೆ ಬರಿಬೇಕು ಅಂತ ಯಾಕನ್ನಿಸ್ತು?**

ಕವಿತೆಯೆಂದರೆ ನನಗೆ ಎಂದೂ ತೀರದ ದಾಹ. ನಾನು ಯಾವಾಗಲೂ ಬರೆಯುವ ಹಂಬಲದಲ್ಲಿರುತ್ತೇನೆ, ದಿನವೂ ಬರೆಯಲು ಸಾಧ್ಯವಾಗದಿದ್ದರೂ ಕೂಡ.

◆ **ನಿಮ್ಮ ಇಷ್ಟದ ಸ್ಪ್ಯಾನಿಷ್ ಪುಸ್ತಕ ಯಾವುದು? ಮತ್ತೆ ನಿಮಗದು ಯಾಕಿಷ್ಟ?**

ನನಗೆ ಬಹಳಷ್ಟು ಇಷ್ಟದ ಪುಸ್ತಕಗಳಿವೆ. ಆದರೂ ಪೆದ್ರೊ ಕಾಲ್ಡೆರಾನ್ ಡೆ ಲಾ ಬಾರ್ಕಾನ 'ಲೈಫ್ ಈಸ್ ಲೈಕ್ ಎ ಡ್ರೀಮ್' ಪುಸ್ತಕವನ್ನು ಹೆಸರಿಸುವುದು ಮುಖ್ಯವೆನಿಸುತ್ತದೆ.

◆ **ನಿಮ್ಮನ್ನು ಯಾರಾದ್ರೂ ಸ್ತ್ರೀವಾದಿ ಅಂತ ಕರೆದ್ರೆ ಏನನ್ಸುತ್ತೆ?**

ಹಾಗೆ ಕರೆದರೆ ನನಗೆ ಯಾವ ಅಸಮಾಧಾನವೂ ಇಲ್ಲ (ನಗು). ಆದರೆ ಮನುಷ್ಯನನ್ನು ಯಾವುದೋ ಒಂದು ಪದದಿಂದ ವಿಶ್ಲೇಷಿಸಲು ಸಾಧ್ಯವಿಲ್ಲ ಎಂಬುದನ್ನು ನಾವು ನೆನಪಿಡಬೇಕು.

◆ **ನಿಮ್ಮ ಪ್ರಕಾರ 'ಕಂಟೆಂಪೊರರಿ' (ಪ್ರಸ್ತುತ) ಎಂಬ ಪರಿಕಲ್ಪನೆಯ ವ್ಯಾಖ್ಯಾನವೇನು?**

ನನ್ನ ಪ್ರಕಾರ ಲ್ಯಾಟಿನ್ ಭಾಷೆಯ 'ಕಂಟೆಂಪೊರೇನಿಯಸ್' ಎನ್ನುವ ಪದ ಹೇಳುವಂತೆ, ಯಾವುದು ಸಮಯದೊಂದಿಗೆ ಸಂಧಿಸುತ್ತದೆಯೋ ಅದು ಸಮಕಾಲೀನತೆ.

◆ **ನಿಮ್ಮ ಬದುಕಿನ ಅತ್ಯಂತ ಖುಷಿಯ ಕ್ಷಣ?**

ಯಾವುದೋ ಒಂದರ ಕುರಿತು ಹೇಳುವುದು ನನ್ನಿಂದ ಸಾಧ್ಯವಿಲ್ಲ. ಪ್ರತಿ ದಿನದ ಸಣ್ಣ ಪುಟ್ಟ ಸಂಭ್ರಮಗಳು ಖುಷಿಯನ್ನು ಇಮ್ಮಡಿಯಾಗಿಸಿವೆ.

◆ **ಮರೆಯಬೇಕು ಎಂದುಕೊಂಡದ್ದು, ಆದರೆ ಇಲ್ಲಿಯತನಕ ಮರೆಯಲು ಸಾಧ್ಯವಾಗದಿರೋದು ಏನದು?**

ನಕಾರಾತ್ಮಕ ಅನುಭವಗಳಿಗಿಂತ ಸಕಾರಾತ್ಮಕ ಅನುಭವಗಳು ಎಂದಿಗೂ ಹೆಚ್ಚು ಗಾಢವಾಗಿರುತ್ತವೆ. ಹಾಗಾಗಿ ಕೆಟ್ಟ ಕ್ಷಣಗಳನ್ನು ಮರೆತುಬಿಡಬೇಕೆಂದು ನಾನು ನಂಬುತ್ತೇನೆ. ನೀವು ಕೂಡ (ನಗು).

◆ **ಎಲ್ಲರಿಗೂ ಒಂದಲ್ಲ ಒಂದ್ಸಲ ಈ ಥರ ಅನ್ನಿಸಿರುತ್ತೆ, ನಿಮಗೆ 'ಕಳ್ಳಿ' ಅಂತ ಅನ್ನಿಸಿದ್ದು ಯಾವಾಗ?**

ಎಂದಿಗೂ ಇಲ್ಲ.

◆ **ಸ್ನೇಹ ಅಂದ್ರೆ?**

ಕಾಳಜಿ ಮಾಡಿ ಕಾಪಿಡಬೇಕಾದ ಒಂದು ದೈವಿಕ ಉಡುಗೊರೆ.

◆ **'ಇಂಡಿಯಾ' ಅಂದ ತಕ್ಷಣ ಮೊದಲು ನಿಮ್ಮ ತಲೆಗೆ ಬರೋ ವಿಚಾರವೇನು?**

ಅಧ್ಯಾತ್ಮ-ಅನುಭಾವ. ಬಣ್ಣಗಳು -ಸೌಂದರ್ಯ.

◆ **ಮುಂದಿನ ಜನ್ಮ ಅಂತ ಇದ್ರೆ ಏನಾಗಿ ಹುಟ್ಟೊಕೆ ಇಷ್ಟಪಡುವಿರಿ?**

ಬೇಸಿಕಲಿ 'ಚಾಯ್ಸ್'ಗಳನ್ನ ನಾನು ಇಷ್ಟಪಡೋದಿಲ್ಲ. ನನ್ನ ಆತ್ಮಕ್ಕೆ ಸರಿ ಹೊಂದುವ ಕಲಿಕೆ ಅಥವಾ ತರಬೇತಿ ಅಗತ್ಯವಿದೆ ಎನ್ನುವಂತಹ ಜೀವಿಯಲ್ಲಿ ನಾನು ಮರುಹುಟ್ಟು ಪಡೆಯಬಯಸುತ್ತೇನೆ. ಈ ದಾರಿಯಿಂದ ಮಾತ್ರ ನನ್ನಾತ್ಮವು ಎಲ್ಲೆಗಳನ್ನು ಮೀರಲು ಸಾಧ್ಯ.